ಪೈಲಟ್ ಸಿಸ್ಟಮ್ ಜಾರಿಗೆ ತಂದಿರುವ ಜಿಲ್ಲೆಗಳು

2150 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ-ಧಾರವಾಡ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) *ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ತೀವ್ರವಾಗಿ ಇತ್ಯರ್ಥ ಮಾಡಲು ಪೈಲೆಟ್ ಸಿಸ್ಟಮ್ ಜಾರಿಗೆ ತಂದಿರುವ ಜಿಲ್ಲೆಗಳ ಸಂಖ್ಯೆ ಎಷ್ಟು? ಅವುಗಳು ಯಾವುವು?*

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 4 (ನಾಲ್ಕು).

1. ಚಿಕ್ಕಮಗಳೂರು 2. ಕೊಡಗು

3. ಮಂಡ್ಯ ಮತ್ತು 4. ಬಿಜಾಪುರ.

ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ

2151.- ಶ್ರೀ ಜಗದೀಶ ಶೆಟ್ಟರ (ಹುಬ್ಬಳ್ಳಿ-ಧಾರವಾಡ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಇರುವ ನ್ಯಾಯಬೆಲೆ ಅಂಗಡಿಗಳ ಒಟ್ಟು ಸಂಖ್ಯೆ ಎಷ್ಟು;*

ಆ) *ಇನ್ನೂ ಹೆಚ್ಚಿನ ಅಂಗಡಿಗಳನ್ನು ತೆರೆಯುವ ಬಗ್ಗೆ ಬೇಡಿಕೆ ಬಂದಿದೆಯೇ; ಬೇಡಿಕೆ ಇದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹುಬ್ಬಳ್ಳಿ 163

ಧಾರವಾಡ 87

ಒಟ್ಟು **250**

ಆ) ಇಲ್ಲ. ಉದ್ಭವಿಸುವುದಿಲ್ಲ.

ಮೀನುಗಾರಿಕೆಗಾಗಿ ಸಮೂಹ ಮನೆಗಳನ್ನು ನಿರ್ಮಿಸುವ ಬಗ್ಗೆ

2152 - ಶ್ರೀ ಎಂ. ಜಯರಾಮಶೆಟ್ಟಿ (ಬೈಂಗೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೀನುಗಾರರಿಗಾಗಿ ಸಮೂಹ ಮನೆಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಸಮೂಹ ಮನೆಗಳನ್ನು ನಿರ್ಮಿಸಲಾಗಿದೆ ಮತ್ತು ನಿರ್ಮಿಸಬೇಕಾದ ಸಮೂಹ ಮನೆಗಳೆಷ್ಟು? ಗ್ರಾಮವಾರು ವಿವರ ತಿಳಿಸುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು.

ಆ) ಕುಂದಾಪುರ ತಾಲ್ಲೂಕುಂಬಾಶಿಗ್ರಾಮದಲ್ಲಿ 29 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. 268 ಅರ್ಜಿಗಳು ಕೆಳಕಂಡ ಗ್ರಾಮಗಳ ಮೀನುಗಾರರಿಂದ ಬಂದಿದ್ದು ಇವುಗಳನ್ನು ಪರಿಶೀಲಿಸಲಾಗುತ್ತಿದೆ.

1)	ತ್ರಾಸಿ	-	24 ಮನೆಗಳು
2)	ಮರವಂತೆ	-	21 ಮನೆಗಳು
3)	ಉಪ್ಪುಂದ	-	54 ಮನೆಗಳು
4)	ನೆಗಳ್ಳಿ	-	11 ಮನೆಗಳು
5)	ಶಿರೂರು	-	17 ಮನೆಗಳು
6)	ಕಿರೀಮಂಜೇಶ್ವರ	-	13 ಮನೆಗಳು
7)	ಕುಂದಾಪುರಕಸಬಾ	-	17 ಮನೆಗಳು
8)	ಹಕ್ಲಾಡಿ	-	25 ಮನೆಗಳು
9)	ತೆಕ್ಕಟ್ಟ	-	14 ಮನೆಗಳು
10)	ಕೋಟೇಶ್ವರ	-	11 ಮನೆಗಳು
11)	ನಾವುಂದ	-	14 ಮನೆಗಳು
12)	ಬೀಜಾಡಿ	-	21 ಮನೆಗಳು
13)	ಗೋಪಾಡಿ	-	26 ಮನೆಗಳು.
	ಒಟ್ಟು	-	**268 ಮನೆಗಳು.**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪಶು ಚಿಕಿತ್ಸಾಲಯಗಳು.

2153 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?